


**ಎಡದಿಂದ ಬಲಕ್ಕೆ:**

1. ಪಾದವನ್ನೇ ಬೆಳೆಸಿ ಸಂಧಾನ ಮಾಡಿ ಪಡೆದ ಗಳಿಕೆ (4)
3. ಗಮಾರನಿಗೆ ಪ್ರತ್ಯಕ್ಷನಾದ ಕೃಷ್ಣಪರಮಾತ್ಮ (3)
4. ಪುನಃ ಪುನಃ ನೆನ್ನೆಯದೇ ಸ್ಮರಣೆ (3)
6. ಗುರುತಿಸುವ ಮೊದಲು ಸುತ್ತುವಂತೆ ಮಾಡು (4)
7. ಕವಿ ಮನಸನ್ನು ಅರಳಿಸಿದ್ದು ಇದೇ ಮೃದುಪುಷ್ಪ (3)
9. ಆತನ ಎಲ್ಲ ಅಹಂಕಾರಕ್ಕೂ ಮೂಲ ಸೆಲೆ ಇಲ್ಲಿದೆ (3)
11. ಪತಿದೇವರಾದರೂ ಆತ ತೀರ ಪೆದ್ದ ಬಿಡಿ (3)
13. ಮುಂದಿನದೇನನ್ನೂ ಯೋಚಿಸದೆ ಧ್ವಂಸ ಮಾಡುವುದೇ? (3)
15. ಕರ ಗ್ರಹಣ ಮಾಡಿದವ ಸೆರೆಮನೆಗೆ ತಳ್ಳಿದನಲ್ಲ! (4)
17. ಜಯಕಾರ ಹಾಕಿದವರಿಗೆಲ್ಲ ಒಂದೊಂದು ಮೇಲು ಹೊದಿಕೆ (3)
18. ಕಳ್ಳರ ಘೋರ ಕೃತ್ಯ ಭಯಂಕರವಾದರೂ ಹಿಂದು ಮುಂದು (3)
19. ತಳ್ಳಿಸುವಂತೆ ಮಾಡಿತ್ತು ಅಸತ್ಯ ನುಡಿ (4)

**ಮೇಲಿಂದ ಕೆಳಕ್ಕೆ:**

1. ಸರ್ವಸಂಗ ತ್ಯಾಗ ಮಾಡಿದರೆಂಬುದು ಒಂದು ಸುದ್ದಿ (3)
2. ನಸು ನಸುವೇ ಇರಲಿ, ನೀರಲ್ಲಿ ತೋಯುವಂತೆ ಮಾಡು (3)
3. ಮುಸುಕನ್ನು ಎಳೆಯ ಹೋದದ್ದಕ್ಕೆ ಭಾರೀ ಕೋಪ ಬಂತೇ? (3)
5. ಫಳಕ್ಕನೆ ಹೊಳೆದ ಮಿಂಚು– ಎಂಥ ರೋಮಾಂಚನ! (3)
7. ಕುಟ್ಟಿಲ್ಲ, ತಟ್ಟಿಲ್ಲ, ಬರೀ ವಂಚನೆ (4)
8. ಮಹಾತ್ಮರ ಚಿಂತನ ತುಂಬ ಶ್ರೇಷ್ಠ ತಾನೇ? (4)
9. ಆತನ ಧ್ವನಿಯೇ ಹಾಗೆ– ಕಷ್ಟದಲ್ಲಿರುವಂಥ ಕೂಗು (4)
10. ರಾಮಾಯಣವನ್ನು ನೆನಪಿಸುವ ಸುಂದರ ಅರಣ್ಯ (4)
12. ಗೋಪುರ ನಿರ್ಮಿಸಿದವರಿಗೆ ಸಂಬಳ ಕೊಟ್ಟರಾ? (3)
14. ಕಮಾನಿನ ಕೆಲಸ– ಅಯ್ಯೋ ಪಾಪ ಎನಿಸುತ್ತದೆ (3)
15. ಸಾಕಾಯಿತೇ? ಹಾಗಾದರೆ ಅದನ್ನೇ ಬಿಸಿ ಮಾಡು (3)
16. ಹೇಳಿದ್ದಾಯಿತು ತಾನೆ? ಅವರಲ್ಲಿ ಹೊಸತೇನಿಲ್ಲ (3)

## ಪದಬಂಧ: 11-3-2010ರ ಉತ್ತರಗಳು

**ಎಡದಿಂದ ಬಲಕ್ಕೆ:**
1. ಅಸಾಮಾನ್ಯ; 3. ಶಬರಿ; 7. ಪಿಕಳಾರ; 8. 'ನಹವಾ'; 9. ಕದ; 12. ರಸ; 14. ಬಳಪ; 15. ಮರುದನಿ; 17. ಅಶನ; 18. ಧನಪತಿ.

**ಮೇಲಿಂದ ಕೆಳಕ್ಕೆ:**
1. ಅರಿ; 2. ಮಾರ್ಜಕ; 4. ಬಡಿವಾರ; 5. ಮಾರಕ; 6. ಕನವರ; 10. ದಳಪತಿ; 11. ಅಂಬರೀಶ; 13. ಸಮರ; 16. ದರ್ಶನ; 17. ಅತಿ

# ಗ್ರಹ ವಿಸ್ಮಯ

## 'ಅನಿಲ ದೈತ್ಯ'– ಅದೇನು?

ನಮ್ಮ ಸೌರವ್ಯೂಹದಲ್ಲಿ ಎಂಟು ಗ್ರಹಗಳಿವೆ: 'ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್' ವಿಸ್ಮಯ ಏನೆಂದರೆ ಈ ಪಟ್ಟಿಯಲ್ಲಿ ಮೊದಲ ನಾಲ್ಕು ಗ್ರಹಗಳು ಉಳಿದ ನಾಲ್ಕು ಗ್ರಹಗಳಿಂದ ಸಂಪೂರ್ಣ ಭಿನ್ನ; ಬಹು ವಿಧಗಳಲ್ಲಿ ವಿಭಿನ್ನ. 'ಬುಧ ಶುಕ್ರ ಭೂಮಿ ಮತ್ತು ಮಂಗಳ;– ಈ ನಾಲ್ಕೂ ಗ್ರಹಗಳದು ಚಿಕ್ಕ ಗಾತ್ರ, ಗಟ್ಟಿ ಘನರೂಪದ ನೆಲ, ಸೂರ್ಯನಿಗೆ ಸಮೀಪವಾದ ನೆಲೆ. ಹಾಗಾಗಿ ಇವು 'ಭೌಮಿಕ ಗ್ರಹಗಳು' ಎಂದೇ ಪ್ರಸಿದ್ಧ.

ತದ್ವಿರುದ್ಧವಾಗಿ 'ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್'– ಈ ನಾಲ್ಕೂ ಗ್ರಹಗಳದು ಬಹುಪಾಲು ಬರೀ ಅನಿಲಗಳ ತನು. ಬಹಳ ಭಾರೀ ಗಾತ್ರ (ಭೂಮಿಗೆ ಹೋಲಿಸಿದಂತೆ ಈ ನಾಲ್ಕೂ ಗ್ರಹಗಳ ಗಾತ್ರಗಳನ್ನು ಚಿತ್ರದಲ್ಲಿ ಗಮನಿಸಿ) ಹಾಗೂ ಸೂರ್ಯನಿಂದ ಬಹು ದೂರ ದೂರದ ನೆಲೆ. ಅನಿಲ ನಿರ್ಮಿತಿಯ ಬೃಹದಾಕಾರದ ಈ ಗ್ರಹಗಳೇ 'ಅನಿಲ ದೈತ್ಯ'ರೆಂದು ಪ್ರಸಿದ್ಧ.



ಈ ಗ್ರಹಗಳು ಅನಿಲ ದೇಹದ ಮಹಾ ದೈತ್ಯನಷ್ಟೇ ಏನಲ್ಲ. ಇವೆಲ್ಲ ಭಾರೀ ಕಂಕಣಗಳನ್ನೂ ಧರಿಸಿವೆ, ಬಹು ಸಂಖ್ಯೆಯ ಚಂದ್ರ ಪರಿವಾರವನ್ನೂ ಪಡೆದಿವೆ. ಸೂರ್ಯನಿಂದ ವಿಪರೀತ ದೂರಗಳಲ್ಲಿವುದರಿಂದ ಅತಿ ಶೀತಲ ಪರಿಸರದ ತೀರ ಮಂದ ಬೆಳಕಿನ ಗ್ರಹಗಳಾಗಿವೆ ಕೂಡ.

'ಅನಿಲ ದೈತ್ಯ'ದ ಗಾತ್ರಗಳು ಸುಲಭಗಾಹ್ಯವಲ್ಲ. ಗುರುಗ್ರಹದ್ದು ಭೂಮಿಯ 1323 ಮಡಿ ಗಾತ್ರ ಶನಿಯದು ಭೂಮಿಯ 752 ಪಟ್ಟು ಗಾತ್ರ. ಯುರೇನಸ್ ಮತ್ತು ನೆಪ್ಚೂನ್‌ನ ಗಾತ್ರಗಳು ಕ್ರಮವಾಗಿ ಧರೆಯ 64 ಮತ್ತು 54 ಮಡಿ ಗಾತ್ರ.

ವಾಸ್ತವವಾಗಿ ನಮ್ಮ ಸೌರವ್ಯೂಹದಲ್ಲಿ ಸೂರ್ಯ ಅವತರಿಸಿದ ನಂತರ ಉಳಿದ್ರ ದ್ರವ್ಯದಿಂದ ಅಲ್ಲಲ್ಲಿ ಎಂಟು ಗ್ರಹಗಳೂ ರೂಪುಗೊಂಡುವು. ಎಲ್ಲ ಗ್ರಹಗಳೂ ಗಟ್ಟಿ ಗರ್ಭವನ್ನೂ, ಅದನ್ನು ಆವರಿಸಿದಂತೆ ದಟ್ಟ ಅನಿಲ ಕವಚವನ್ನೂ ಧರಿಸಿ ದೊಡ್ಡ ಗಾತ್ರದಲ್ಲೇ ಇದ್ದುವು. ಆದರೆ ಮುಂದೆ ಕೋಟ್ಯಾಂತರ ವರ್ಷಗಳಲ್ಲಿ ಸೂರ್ಯ 'ಸ್ಥಿರ ಸ್ಥಿತಿ' ತಲುಪಿದ ನಂತರ ಅದರಿಂದ ನಿರಂತರ ಹೊಮ್ಮಿ ಹರಿಯತೊಡಗಿದ ವಿದ್ಯುತ್ಪೂರಿತ ಕಣಗಳ 'ಬಿರುಗಾಳಿ' ಸೂರ್ಯನ ಸನಿಹದ ಗ್ರಹಗಳ ಅನಿಲ ಕವಚಗಳನ್ನೆಲ್ಲ ಗುಡಿಸಿ ಹಾಕಿತು. ಆದರೆ ಅತಿ ದೂರದ ಗ್ರಹಗಳ ಅನಿಲ ಕವಚಗಳು ಇಂಥ ಪರಿಣಾಮಕ್ಕೆ ಒಳಗಾಗದೆ ಹಾಗೇ ಉಳಿದು– ಆದ್ದರಿಂದಲೇ ಅನಿಲ ದೈತ್ಯರು ಅದೇ ರೂಪದಲ್ಲೇ ಉಳಿದಿವೆ.

■ ಎನ್. ವಾಸುದೇವ್